**ಪಿ ಡಬ್ಲೂಃ 3** **ಅಸಲು ದಾವಾ ಸಂಖ್ಯೆಃ 211/2020**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ., ರವರ ನ್ಯಾಯಾಲಯ, ಗುಬ್ಬಿ.**

**ದಿನಾಂಕಃ 10.08.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**

| **ಸತ್ಯ ಪ್ರತಿಜ್ಞೆಯ ಮೇರೆಗೆ** |
|---|

**ಪಾಟೀ ಸವಾಲುಃ 1 ಮತ್ತು 2ನೇ ಪ್ರತಿವಾದಿಯ ಪರ ವಕೀಲರಾದ ಶ್ರೀಃ ಎಸ್ ಎಲ್ ಆರ್ ರವರಿಂದಃ**

ನೀವು ಎಲ್ಲಿ ವಾಸವಾಗಿದ್ದೀರಿ ಎಂದರೆ ಸಾಕ್ಷಿಯು ಗದ್ದೆಹಳ್ಳಿ ಗ್ರಾಮದಲ್ಲಿ ಎಂದು ನುಡಿಯುತ್ತಾರೆ. ನಿಮ್ಮ ತಂದೆಯ ಹೆಸರು ಏನು ಎಂದರೆ ನರಸಯ್ಯ ಎಂದು ನುಡಿಯುತ್ತಾರೆ. ನೀವು ಗದ್ದೆಹಳ್ಳಿ ಗ್ರಾಮದಲ್ಲಿ ವಾಸವಾಗಿದ್ದೀರಿ ಎಂದು ತೋರಿಸುವ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಿರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನಿಮ್ಮ ಪ್ರಮಾಣ ಪತ್ರದಲ್ಲಿ ದಾವಾ ಆಸ್ತಿ ಸಿ ಎಸ್ ಪುರ ಹೋಬಳಿ, ಮಾವಿನಹಳ್ಳಿ ಗ್ರಾಮಕ್ಕೆ ಸೇರಿದ ಆಸ್ತಿಯಾಗಿರುತ್ತದೆ ಎಂದು ಹೇಳಿದ್ದೀರಿ ಎಂದರೆ ಸಾಕ್ಷಿಯು ಇಲ್ಲ ಅದು ಗದ್ದೆಹಳ್ಳಿ ಗ್ರಾಮದ ಆಸ್ತಿ ಎಂದು ನುಡಿಯುತ್ತಾರೆ. ಸೈಟ್ ನಂ.109 ಆಗಿರುತ್ತದೆ ಎಂದು ತೋರಿಸುವ ಲೇ ಔಟ್ ನಕ್ಷೆಯನ್ನು ಹಾಜರುಪಡಿಸಿದ್ದಿರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನೀವು ಎಷ್ಟು ವರ್ಷಗಳಿಂದ ಅಲ್ಲಿ ವಾಸವಾಗಿದ್ದೀರಿ ಎಂದರೆ 50 ವರ್ಷದಿಂದ ಎಂದು ನುಡಿಯುತ್ತಾರೆ. ದಾವಾ ಅನುಸೂಚಿ ಸ್ವತ್ತು ನಿಮ್ಮ ಅಥವಾ ನಿಮ್ಮ ತಾತನ ಆಸ್ತಿಯಾಗಿರುವುದಿಲ್ಲ ಎಂದರೆ ಸಾಕ್ಷಿಯು ನಮ್ಮ ಆಸ್ತಿಯಾಗಿರುವುದಿಲ್ಲ ಆದರೆ ಗ್ರಾಮದ ಆಸ್ತಿ ಎಂದು ನುಡಿಯುತ್ತಾರೆ. ದಾವಾ ಅನುಸೂಚಿ ಸ್ವತ್ತು ಗ್ರಾಮದ ಆಸ್ತಿ ಎಂದು ತೋರಿಸುವ ಯಾವುದಾದರೂ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಿರಾ ಎಂದರೆ ಕೊಟ್ಟಿದ್ದೇನೆ ಎಂದು ನುಡಿಯುತ್ತಾರೆ. ಅದಕ್ಕೆ ಸಂಬಂಧಿಸಿದ ಯಾವ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಿ ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಅನುಸೂಚಿ ಸ್ವತ್ತು ಗದ್ದೆಹಳ್ಳಿ ಗ್ರಾಮದಲ್ಲಿ ಇದ್ದು ಅದರಲ್ಲಿ ಪ್ರತಿವಾದಿ 1 ಮತ್ತು 2 ರವರು ತಮಗೆ ಮಂಜೂರಾಗಿದ್ದ ಸೈಟಿನಲ್ಲಿ ಮನೆ ಕಟ್ಟಿಕೊಂಡು ವಾಸವಾಗಿದ್ದಾರೆ ಎಂದರೆ ಸರಿಯಲ್ಲ ಸಾರ್ವಜನಿಕ ಆಸ್ತಿಗೆ ಪ್ರತಿವಾದಿಗಳು ತೊಂದರೆ ಕೊಡುತ್ತಿದ್ದಾರೆ ಎಂದು ನೀವು

ಪಂಚಾಯಿತಿ ಕಾರ್ಯದರ್ಶಿಗೆ ಅಥವಾ ಪಂಚಾಯಿತಿಗೆ ಸದಸ್ಯರುಗಳಿಗೆ ದೂರನ್ನು ನೀಡಿದ್ದಿರಾ ಎಂದರೆ ಕೊಟ್ಟಿದ್ದೇವೆ ಎಂದು ನುಡಿಯುತ್ತಾರೆ. ಸದರಿ ದೂರಿನ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಿರಾ ಎಂದರೆ ಕೊಟ್ಟಿದ್ದೇನೆ ಎಂದು ನುಡಿಯುತ್ತಾರೆ. ಆ ದೂರಿನ ಪ್ರತಿ ನ್ಯಾಯಾಲಯದಲ್ಲಿ ಇರುವುದಿಲ್ಲ ಎಂದರೆ ಕೊಟ್ಟಿದ್ದೇನೆ ಎಂದು ನುಡಿಯುತ್ತಾರೆ. ಈ ದಾವಾ ಸಲ್ಲಿಸಲು ಯಾವುದೇ ವ್ಯಾಜ್ಯ ಕಾರಣ ಇರುವುದಿಲ್ಲ ಎಂದರೆ ಸರಿಯಲ್ಲ. 4ನೇ ಪ್ರತಿವಾದಿಯು ಸರ್ಕಾರಿ ನೌಕರರಾಗಿದ್ದು ಅವರ ಪಕ್ಷಗಾರರನ್ನಾಗಿ ಮಾಡುವ ಮೊದಲು ಅವರಿಗೆ ಸಿ ಪಿ ಸಿ ಕಲಂ 80 ರ ರೀತ್ಯಾ ನೋಟೀಸ್ ಅನ್ನು ನೀಡದೇ ಇರುವುದರಿಂದ ಈ ದಾವಾ ವಜಾ ಆಗಬೇಕಾಗಿರುತ್ತದೆ ಎಂದರೆ ಸರಿಯಲ್ಲ. 3ನೇ ಪ್ರತಿವಾದಿ ಯಾವ ಊರಿನವರು ಎಂದರೆ ಗದ್ದೆಹಳ್ಳಿಯವರು ಎಂದು ನುಡಿಯುತ್ತಾರೆ. ನೀವು ಮತ್ತು 3ನೇ ಪ್ರತಿವಾದಿ ಚೆನ್ನಾಗಿ ಇದ್ದೀರಿ ಎಂದರೆ ಸಾಕ್ಷಿಯು ಊರಿನವರಾಗಿದ್ದು ಚೆನ್ನಾಗಿ ಇದ್ದೇವೆ ಎಂದು ನುಡಿಯುತ್ತಾರೆ. ಈ ಸಲ್ಲಿಸಲು 3ನೇ ಪ್ರತಿವಾದಿಯೇ ನಿಮಗೆ ಕುಮ್ಮಕ್ಕು ನೀಡಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾವೇ ಸಲ್ಲಿಸಿದ್ದೇವೆ ಎಂದು ನುಡಿಯುತ್ತಾರೆ. ವಾದಿಯರಾದ ನೀವು ಮತ್ತು 3ನೇ ಪ್ರತಿವಾದಿ ಸೇರಿ ವಯಸ್ಸಾದ 1 ಮತ್ತು 2ನೇ ಪ್ರತಿವಾದಿಯರಿಗೆ ತೊಂದರೆ ನೀಡುವ ಉದ್ದೇಶದಿಂದ ಈ ಸುಳ್ಳು ದಾವಾ ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ. 1ನೇ ವಾದಿ ಸಲ್ಲಿಸಿರುವ ದಾಖಲಾತಿಗಳು ದಾವಾ ಸ್ವತ್ತಿಗೆ ಸಂಬಂಧಿಸಿದ ದಾಖಲಾತಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ.3 ರ ಗ್ರಾಮ ಪಂಚಾಯಿತಿಯ ಸಾಮಾನ್ಯ ಸಭೆಯಲ್ಲಿ ಆ ಅಸ್ತಿಯು ಗದ್ದೆಹಳ್ಳಿ ಗ್ರಾಮಕ್ಕೆ ಸೇರಿಲ್ಲ ಮತ್ತು ಉಂಗ್ರ ಗ್ರಾಮದ ಸ.ನಂ.135 ರಲ್ಲಿನ ಆಸ್ತಿ ಎಂದು ತೀರ್ಮಾನವಾಗಿರುತ್ತದೆ ಎಂದರೆ ಸಾಕ್ಷಿಯು ಗದ್ದೆಹಳ್ಳಿ ಗ್ರಾಮಕ್ಕೆ ಸೇರಿದ್ದು ಎಂದು ನುಡಿಯುತ್ತಾರೆ.

2. ಉಂಗ್ರ ಗ್ರಾಮದ ಸ.ನಂ.135 ರಲ್ಲಿ ಒಟ್ಟು ಎಷ್ಟು ಎಕರೆ ಜಮೀನು ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಉಂಗ್ರ ಗ್ರಾಮದ ಸ.ನಂ.135 ರಲ್ಲಿ ಎಷ್ಟು ಜನ ಮನೆ ಕಟ್ಟಿಕೊಂಡಿದ್ದಾರೆ ಎಂದರೆ ಯಾರು ಕಟ್ಟಿಲ್ಲ ಎಂದು ನುಡಿಯುತ್ತಾರೆ. ಉಂಗ್ರ ಗ್ರಾಮದ ಸ.ನಂ.135 ರ ಪಹಣಿಯಲ್ಲಿ ಈಗಲೂ ಸರ್ಕಾರಿ ಗೋಮಾಳ ಎಂದು ಇರುತ್ತದೆ ಎಂದರೆ ಸರಿ. ಸರ್ಕಾರಿ ಗೋಮಾಳವಾಗಿದ್ದರೂ ಕೂಡ ಪ್ರತಿವಾದಿಯರಿಗೆ ತೊಂದರೆ ನೀಡಲು ಆ ಆಸ್ತಿ ಶನಿಮಹಾತ್ಮ ಸ್ವಾಮಿ ಆಸ್ತಿ ಎಂದು

ಪಂಚಾಯಿತಿ ಅಧಿಕಾರಿಗಳ ಜೊತೆ ಶಾಮೀಲ್ ಆಗಿ ದಾಖಲಾತಿಗಳನ್ನು ಸೃಷ್ಟಿಸಿಕೊಂಡಿದ್ದೀರಿ ಎಂದರೆ ಸರಿಯಲ್ಲ. ನಿಪಿ.3 ರ ಸಾಮಾನ್ಯ ಸಭೆಯಲ್ಲಿ ಆದ ತೀರ್ಮಾನದಂತೆ ಆಸ್ತಿಯನ್ನು ಶನಿಮಹತ್ಮಾ ಸ್ವಾಮಿ ದೇವಾಲಯಕ್ಕೆ ಮಂಜೂರು ಮಾಡಿಕೊಡಿ ಎಂದು ಅರ್ಜಿ ತಹಸೀಲ್ದಾರ್ ರವರಿಗೆ ಸಲ್ಲಿಸಿದ್ದು, ಸದರಿ ಅರ್ಜಿಯ ಅಧಾರದ ಮೇಲೆ ತಹಸೀಲ್ದಾರ್ ರವರು ಇನ್ನು ಯಾವುದೇ ಆದೇಶ ಮಾಡಿಲ್ಲ ಎಂದರೆ ಆದೇಶ ಮಾಡಿದ್ದಾರೆ ಎಂದು ನುಡಿಯುತ್ತಾರೆ. ತಹಸೀಲ್ದಾರ್ ರವರ ಆದೇಶದ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಿರಾ ಎಂದರೆ ಕೊಟ್ಟಿದ್ದೇನೆ ಎಂದು ನುಡಿಯುತ್ತಾರೆ. ಆ ರೀತಿ ಯಾವುದೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸದೇ ಇದ್ದರೂ ಕೂಡ ನೀವು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಸರ್ಕಾರಿ ಜಮೀನನ್ನು ಮಂಜೂರು ಮಾಡುವ ಮೊದಲು ಜಿಲ್ಲಾಧಿಕಾರಿಗಳಿಂದ ಭೂ ಪರಿವರ್ತನೆ ಮಾಡಿದ ನಂತರ ತಹಸೀಲ್ದಾರ್ ರವರು ಮಂಜೂರು ಮಾಡಬೇಕಾಗಿರುತ್ತದೆ ಎಂದರೆ ಮಂಜೂರಾಗಿದೆ ಎಂದು ನುಡಿಯುತ್ತಾರೆ. ಯಾವುದೇ ರೀತಿಯ ಕಾನೂನನ್ನು ಪಾಲಿಸದೇ ಪ್ರತಿವಾದಿಗಳಿಗೆ ತೊಂದರೆ ನೀಡುವ ಉದ್ದೇಶದಿಂದ ವಿನಾಕಾರಣ ಸುಳ್ಳು ದಾವಾ ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ.

3. ಉಂಗ್ರ ಗ್ರಾಮದ ಸ.ನಂ.135 ರಲ್ಲಿ ನೀವು, 3ನೇ ಪ್ರತಿವಾದಿ ಭದ್ರೆಗೌಡ, 1 ವಾದಿ ಜಗದೀಶ, 4ನೇ ವಾದಿ ಚಿಕ್ಕಹೊನ್ನಯ್ಯ ರವರು ಅಕ್ರಮವಾಗಿ ತಲಾ 2 ಗುಂಟೆ ಆಸ್ತಿಯಲ್ಲಿ ಮನೆಯನ್ನು ಕಟ್ಟಿದ್ದೀರಿ ಎಂದರೆ ಸರಿಯಲ್ಲ. ಉಂಗ್ರ ಗ್ರಾಮದ ಸರ್ಕಲ್ ನಲ್ಲಿ 3ನೇ ಪ್ರತಿವಾದಿ ಭದ್ರೆಗೌಡರು ಶಾಮಿಯಾನ ಅಂಗಡಿ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಇವುಗಳನ್ನು ಪ್ರಶ್ನೆ ಮಾಡಿ 1 ಮತ್ತು 2ನೇ ಪ್ರತಿವಾದಿಯರು ಪಂಚಾಯಿತಿಗೆ ದೂರನ್ನು ಸಲ್ಲಿಸಿದ್ದ ಕಾರಣಕ್ಕೆ ನೀವುಗಳು ಈ ಸುಳ್ಳು ದಾವೆಯನ್ನು ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ. ಸ.ನಂ.135 ರ ಆರ್ ಟಿ ಸಿ ಅಲ್ಲಿ 15 ಎಕರೆ 5 ಗುಂಟೆ ಗೋಮಾಳ ಜಮೀನು ಎಂದು ತೋರಿಸುತ್ತಿದೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ನಿಮ್ಮ ವಿರುದ್ದ ಸಲ್ಲಿಸಿರುವ ದೂರಿನ ಅಧಾರದ ಮೇಲೆ ತಹಸೀಲ್ದಾರ್ ರವರು ಮತ್ತು ಜಿಲ್ಲಾಧಿಕಾರಿಗಳು ಸ್ಥಳಕ್ಕೆ ಬಂದು ನೀವು ಅಕ್ರಮವಾಗಿ ಸ್ವಾಧೀನದಲ್ಲಿ ಇರುವ ಸ.ನಂ.135 ರ ಆಸ್ತಿಯಿಂದ ನಿಮ್ಮನ್ನು ತೆರವುಗೊಳಿಸುತ್ತಾರೆ ಎನ್ನುವ ಕಾರಣಕ್ಕೆ ಮತ್ತು ಅದರಿಂದ ತಪ್ಪಿಸಿಕೊಳ್ಳಲು ಈ ಸುಳ್ಳು ದಾವೆಯನ್ನು ಸಲ್ಲಿಸಿದ್ದೀರಿ

ಎಂದರೆ ಸರಿಯಲ್ಲ. ನ್ಯಾಯಾಲಯದಲ್ಲಿ ದಾವಾವನ್ನು ಸಲ್ಲಿಸಿದರೇ ನಿಮಗೆ ಸ್ವಲ್ಪ ಕಾಲವಕಾಶ ಸಿಗುತ್ತದೆ ಎನ್ನುವ ಕಾರಣಕ್ಕೆ ಮತ್ತು 1 ಮತ್ತು 2 ನೇ ಪ್ರತಿವಾದಿಯರಿಗೆ ತೊಂದರೆ ನೀಡಲು ಈ ಸುಳ್ಳು ದಾವೆಯನ್ನು ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ. ಸ.ನಂ.135 ರ ಆಸ್ತಿ ಸರ್ಕಾರಿ ಗೋಮಾಳ ಎಂದು ಇದ್ದರೂ ಕೂಡ ನಿಪಿ.1 ರಿಂದ 14 ರ ದಾಖಲಾತಿಗಳನ್ನು ಶನಿದೇವರ ಆಸ್ತಿ ಎಂದು ಪಂಚಾಯಿತಿಯಲ್ಲಿ ನಮೂದಿಸಿ ಸೃಷ್ಟಿ ಮಾಡಿ ತಂದು ಹಾಜರುಪಡಿಸಿದ್ದೀರಿ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಹಿಂದಿನಿಂದಲೂ ಇತ್ತು ಎಂದು ನುಡಿಯುತ್ತಾರೆ. ಇವುಗಳು ಸೃಷ್ಟಿತ ದಾಖಲಾತಿಗಳಾಗಿರುವುದರಿಂದ ಈ ದಾವೆಯು ಊರ್ಜಿತವಾಗಿರುವುದಿಲ್ಲ ಮತ್ತು ವಜಾ ಆಗಬೇಕಾಗಿರುತ್ತದೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ,**
**ಗುಬ್ಬಿ**

Pw.1 is present. Partly cross examined.
Prays time.
For further cross of Pw.1.
Call on.12.10.2026.